**ಮುಖ್ಯ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಹಾವೇರಿ.**

**ಸಿ.ಸಿ.ನಂ.38/2022**

| | | | |
|---|---|---|---|
| ಸಾಕ್ಷಿದಾರರ ಹೆಸರು | ಶಿವಪ್ಪ ದೊಡ್ಡಮನಿ | ಸಿಡಬ್ಲ್ಯೂ | 12 |
| ತಂದೆ ಹೆಸರು | ಫಕ್ಕೀರಪ್ಪ | ಪಿಡಬ್ಲ್ಯೂ | 3 |
| ವಯಸ್ಸು | 74 ವರ್ಷ | | |
| ಉದ್ಯೋಗ | ಕೃಷಿ | | |
| ವಾಸಸ್ಥಳ | ಚಿಕ್ಕಹುಲ್ಲಾಳ | | |

**ದಿಃ 31.07.2024 ರಂದು ಸಾಕ್ಷಿದಾರರಿಗೆ ಪ್ರಮಾಣ ವಚನ ಬೋಧಿಸಲಾಯಿತು.**
**ಮುಖ್ಯ ವಿಚಾರಣೆಃ ಹಿ.ಸ.ಸ.ಅಭಿಯೋಜಕರಿಂದ.**

**1).** ಈಗ್ಗೆ ಮೂರುವರೆ ವರ್ಷಗಳ ಹಿಂದೆ ಹಾವೇರಿಯಿಂದ ಹಾನಗಲ್ ರಸ್ತೆಯಲ್ಲಿ ನಮ್ಮ ಊರಿಗೆ ದ್ವಿಚಕ್ರ ವಾಹನದಲ್ಲಿ ಹೋಗುತ್ತಿದ್ದೆ. ಪೆಟ್ರೋಲ್ ಬಂಕ ಹತ್ತಿರ ಕುಳೇನೂರ ಕ್ರಾಸ ಬಳಿ ನಮ್ಮ ಗ್ರಾಮದ ಉಡಚಪ್ಪ ಮತ್ತು ಸುರೇಶ ದ್ವಿಚಕ್ರ ವಾಹನದಲ್ಲಿ ನಮ್ಮ ಮುಂದೆ ಸುಮಾರು 15 ರಿಂದ 20 ಅಡಿ ಮುಂದೆ ಹೋಗುತ್ತಿದ್ದರು. ಆಗ ಎದುರಿನಿಂದ ಹಾನಗಲ್ ಕಡೆಯಿಂದ ಒಂದು ಕಾರ್ ವೇಗವಾಗಿ ಬಂದು ಉಡಚಪ್ಪ ಮತ್ತು ಸುರೇಶ ಅವರು ಇದ್ದ ದ್ವಿಚಕ್ರ ವಾಹನಕ್ಕೆ ಡಿಕ್ಕಿಪಡಿಸಿತು. ಅವರಿಬ್ಬರಿಗೂ ಕೈ, ಕಾಲುಗಳು ಮುರಿದಿತ್ತು. ನಾನು ತಕ್ಷಣ ಚಾ.ಸಾ-1 ರವರಿಗೆ ಪೋನ ಮಾಡಿ ಹೇಳಿದೆ. ಕಾರನ್ನು ನ್ಯಾಯಾಲಯದ ಮುಂದೆ ಇರುವ 1 ನೇ ಆರೋಪಿ ಚಾಲನೆ ಮಾಡುತ್ತಿದ್ದ. ಆ ದಿನ ಅಪಘಾತ ಸ್ಥಳದಲ್ಲಿ ಆತನನ್ನು ನೋಡಿದ್ದೇನೆ. 1 ನೇ ಆರೋಪಿಯ ತಪ್ಪಿನಿಂದ ಅಪಘಾತ ಆಗಿದೆ. ಚಾ.ಸಾ-1 ರವರು ಬಂದ ನಂತರ ಗಾಯಾಳುಗಳನ್ನು ಹಾವೇರಿಯ ಸರ್ಕಾರಿ ಆಸ್ಪತ್ರೆಗೆ ಕರೆದುಕೊಂಡು ಹೋದೇವು. ವಾಹನಗಳನ್ನು ನೋಡಿದರೆ ಗುರುತಿಸುತ್ತೇನೆ. ನಿ.ಪಿ-5 ರಿಂದ ನಿ.ಪಿ-8 ಪೋಟೋಗಳಲ್ಲಿರುವ ದ್ವಿಚಕ್ರ ವಾಹನ ಮತ್ತು ಕಾರನ್ನು ನೋಡಿ ಗುರುತಿಸಿರುತ್ತಾರೆ. ಪೊಲೀಸರು ನನ್ನನ್ನು ವಿಚಾರಣೆ ಮಾಡಿದ್ದಾರೆ.

**ಪಾಟೀ ಸವಾಲುಃ 1 ನೇ ಆರೋಪಿ ಹಾಜರು, ವಕೀಲರು ಗೈರು ಹಾಜರು. ಪಾಟೀ ಸವಾಲಿಗೆ ಯಾವುದೇ ಕೋರಿಕೆ ಇರುವದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.**

**ಮರು ವಿಚಾರಣೆ ಇಲ್ಲಾ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.
ಎಂದು ಒಪ್ಪಿರುತ್ತಾರೆ.

ಮುಖ್ಯ ನ್ಯಾಯಿಕ ದಂಡಾಧಿಕಾರಿಗಳು
ಹಾವೇರಿ.